



14
ಓ ರಾಜನೇ, ಈ ಕಬ್ಬಿಣದ ತುಂಡು ಹಾಗೆಯೇ ಇರಲಿ. ಇದಕ್ಕೆ ಹೂವಿನ ಬುಟ್ಟಿಯನ್ನು ತೂಗುಹಾಕಬಹುದು. ನಾನು ಶಿವನ ಪೂಜೆಗೆ ಹೂವುಗಳನ್ನು ಕೀಳುವಾಗ ಇದು ಉಪಯೋಗಕ್ಕೆ ಬರುತ್ತದೆ.
ಓ ಮಹಾತ್ಮರೇ, ನೀವು ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡಿರುವವರು. ನಿಮಗೆ ಈ ದುರದೃಷ್ಟ ಹೇಗೆ ತಾನೇ ಬರಲು ಸಾಧ್ಯ?


15
ಓ ರಾಜನೇ, ನನ್ನ ಬಾಲ್ಯದ ದಿನಗಳಲ್ಲಿ ನಾನು ಚಿಟ್ಟೆಗಳನ್ನು ಹಿಡಿಯುವುದರಲ್ಲಿ, ಅವುಗಳ ರೆಕ್ಕೆಗಳನ್ನು ಕೀಳುವುದರಲ್ಲಿ, ಅವುಗಳಿಗೆ ಗುಂಡುಸೂಜಿ ತೂರಿಸುವುದರಲ್ಲಿ ಆನಂದವನ್ನು ಕಾಣುತ್ತಿದ್ದೆನು. ನನ್ನ ತುಂಟತನಕ್ಕೆ ದೇವರು ಕೊಟ್ಟ ಶಿಕ್ಷೆ ಇದು.


16
ಮಹಾತ್ಮ ಮಾಂಡವ್ಯರು ಕಬ್ಬಿಣದ ಶೂಲವನ್ನು ಕತ್ತಿನಲ್ಲಿ ಸಿಕ್ಕಿಸಿಕೊಂಡೇ ತಮ್ಮ ಇಡೀ ಜೀವನವನ್ನು ಕಳೆದರು. ಅದಕ್ಕೆಂದೇ ಅವರನ್ನು 'ಶೂಲದ ಮಾಂಡವ್ಯ' ಎಂದು ಕರೆಯಲಾಗುತ್ತಿತ್ತು. ಅವರು ತಪಸ್ಸಾಧನೆಯಲ್ಲಿ ಪರಿಣತರಾಗಿದ್ದರು. ಆದರೂ ಬಾಲ್ಯದಲ್ಲಿ ಮಾಡಿದ ತಪ್ಪಿಗೆ ಅವರು ಶಿಕ್ಷೆಯನ್ನು ಅನುಭವಿಸಬೇಕಾಯಿತು. ಇದು ನಮಗೆಲ್ಲರಿಗೂ ದೊಡ್ಡ ಪಾಠ.
"ಈ ದೇಹ ಕಾಣಿಸಿ ಕೊಳ್ಳುತ್ತದೆ; ಅದೃಶ್ಯ ವಾಗುತ್ತದೆ. ಆತ್ಮ ಮಾತ್ರ ಎಂದಿಗೂ ನಶಿಸುವುದಿಲ್ಲ. ಅದು ಅಡಕೆಯಿದ್ದ ಹಾಗೆ. ಅದಿನ್ನೂ ಹಸಿಯಾಗಿದ್ದಾಗ ಅದನ್ನು ಸಿಪ್ಪೆಯಿಂದ ಬೇರ್ಪಡಿಸುವುದು ಕಷ್ಟ. ಒಣಗಿದಾಗ ಅದನ್ನು ಬೇರ್ಪಡಿಸಬಹುದು. ಅದೇ ರೀತಿ, ಭಗವತ್ಸಾಕ್ಷಾತ್ಕಾರವಾದ ನಂತರವಷ್ಟೇ ನಮಗೆ ನಿಜವಾದ ಅರಿವು ಉಂಟಾ ಗುತ್ತದೆ. ಆತ್ಮವು ದೇಹಕ್ಕಿಂತ ಭಿನ್ನ ಎನ್ನುವ ಜ್ಞಾನ ಆಗ ತಾನೇತಾನಾಗಿ ತಿಳಿಯುತ್ತದೆ."
–ಶ್ರೀರಾಮಕೃಷ್ಣ